ಗುಜರಾತಿನ 'ಛೋಟಾ ರಣ್' (Little Rann of Kutch) ನಿಜಾರ್ಥದಲ್ಲಿಯೂ ರಣಗುಡುವ ರಣಭೂಮಿ. 4954 ಚ.ಕಿ.ಮೀ. ವಿಸ್ತೀರ್ಣವಿರುವ ಈ ಪ್ರದೇಶದಲ್ಲಿ ಕಣ್ಣುಹಾಯಿಸಿದಷ್ಟು ದೂರವೂ ಬಿರುಕುಬಿಟ್ಟ ಉಬ್ಬುತಗ್ಗಿನ ನೆಲ. ಈ ಪ್ರದೇಶ ಲವಣಯುತ ಮರುಭೂಮಿ ಮತ್ತು ಋತುಮಾನಿಕ ಜೌಗುಭೂಮಿ ಎರಡೂ ಹೌದು. ಇನ್ನೊಂದು ವಿಶೇಷ ಎಂದರೆ, ಅಳಿಯುತ್ತಿರುವ ಕಾಡು ಕತ್ತೆಗಳು (ವೈಲ್ಡ್ ಆಸ್) ಇಲ್ಲಿವೆ. ಈ ಪ್ರದೇಶವನ್ನೀಗ 'ಕಾಡು ಕತ್ತೆಗಳ ಅಭಯಾರಣ್ಯ' ಎಂದು ಘೋಷಿಸಲಾಗಿದೆ. ನೀವು ಉಪ್ಪಿನ ಸೀಸನ್ನಿನ ಕೊನೆಯ ತಿಂಗಳಲ್ಲಿ, ಅಂದರೆ ಮೇ ತಿಂಗಳಲ್ಲಿ ಇಲ್ಲಿಗೆ ಬಂದರೆ ಅಲ್ಲೊಂದು ಇಲ್ಲೊಂದು ಕಡೆ ಉಪ್ಪಿನ ದೊಡ್ಡ ದೊಡ್ಡ ಗುಡ್ಡೆಗಳು ಕಾಣುತ್ತವೆ. ಅವುಗಳಿಂದ ತುಸು ದೂರದಲ್ಲಿ ಹರಕು ಜೋಪಡಿಗಳು ಕಾಣುತ್ತವೆ. ಹತ್ತಿರ ಹೋದಾಗ ಉಪ್ಪಿನ ಗದ್ದೆಗಳು ಕಾಣುತ್ತವೆ. ಇನ್ನೂ ಹತ್ತಿರ ಹೋದಾಗ ಬಿರುಬಿಸಿಲಿನಲ್ಲಿ ಉಪ್ಪಿನ ಗದ್ದೆಯಲ್ಲಿ ಕೆಲಸ ಮಾಡುವ 'ಅಗರಿಯಾ'ಗಳು ಕಾಣುತ್ತಾರೆ.

ಹೆಚ್ಚಿನವರು ಬರಿಗಾಲಿನಲ್ಲಿಯೇ ಉಪ್ಪಿನ ಗದ್ದೆಯೊಳಗೆ ಇಳಿದು ದಾಂತಾರಾ ಹಿಡಿದು ಕೆಲಸ ಮಾಡುತ್ತಾರೆ. ಬರಿಗಾಲಿನಲ್ಲಿಯೇ ಗದ್ದೆಗಳ ಬದುವಿನಲ್ಲಿ ಓಡಾಡುತ್ತಾರೆ. ಬರಿಗೈಯಲ್ಲಿಯೇ ಉಪ್ಪು ಹಿಡಿದು ಪರೀಕ್ಷಿಸುತ್ತಾರೆ. ಹೌದು, ಬರಿಗಾಲು, ಬರಿಗೈಯಲ್ಲಿ ಕೆಲಸ ಮಾಡುವ ಅಗರಿಯಾಗಳಿಗೆ ಕೆಲವೊಮ್ಮೆ ಉಪ್ಪಿನ ಮಾರಾಟದ ನಂತರ ಖರ್ಚು ಮಾಡಿದ ಕಾಸೂ ಗಿಟ್ಟದೆ ಬರಿಗೈಯಲ್ಲಿ ರಣದಿಂದ ವಾಪಸು ಹೋಗುತ್ತಾರೆ.

ಇಡೀ ದೇಶದಲ್ಲಿ ತಯಾರಾಗುವ ಉಪ್ಪಿನ ಮುಕ್ಕಾಲು ಭಾಗ ಗುಜರಾತಿನಲ್ಲಿ ತಯಾರಾಗುತ್ತದೆ. 'ಇನ್‌ಲ್ಯಾಂಡ್ ಸಾಲ್ಟ್', ಅಂದರೆ ಭೂಮಿಯಿಂದ ಲವಣಜಲ ಅಥವಾ ಬ್ರೈನ್ ತೆಗೆದು ಉಪ್ಪು ತಯಾರು ಮಾಡುವುದು ಗುಜರಾತಿನ ಛೋಟಾ ರಣ್‌ನಲ್ಲಿ ಮಾತ್ರ. ಅರಬ್ಬಿ ಸಮುದ್ರದ ಕಛ್ ಖಾರಿಯ ಕೊರಕಲುಗಳಿಂದ ಸಮುದ್ರದ ನೀರು ರಣ್‌ನ ಭೂಮಿಯೊಳಗೆ ಎಷ್ಟೋ ವರ್ಷಗಳಿಂದ ಸಂಗ್ರಹವಾಗುತ್ತಲೇ ಇದೆ. ಜುಲೈನಿಂದ ಸೆಪ್ಟೆಂಬರಿನವರೆಗೆ ಆಗೀಗ ಮಳೆಯಾಗುವ ಈ ಭಾಗದಲ್ಲಿ ಅಂದಾಜು ವಾರ್ಷಿಕ 200 ಮಿ.ಮೀ. ಮಳೆಯಾಗುತ್ತದೆ. ಮಳೆನೀರು ಅಲ್ಲಿಯೇ ನಿಲ್ಲುವುದರಿಂದ ಎರಡು–ಮೂರು ತಿಂಗಳು ಜೌಗುಭೂಮಿಯಾಗಿರುತ್ತದೆ. ಇನ್ನುಳಿದ ಸಮಯದಲ್ಲಿ ಇದು ಉಪ್ಪಿನ ಜೌಗುಭೂಮಿ (ಸಾಲ್ಟ್ ಮಾರ್ಶ್). ಇಲ್ಲಿ ತಲೆತಲಾಂತರಗಳಿಂದ ಉಪ್ಪು ಮಾಡುವ ಕಾಯಕದಲ್ಲಿ ತೊಡಗಿದವರು ಅಗರಿಯಾ ಎಂಬ ಬುಡಕಟ್ಟು ಜನಾಂಗ. ಗುಜರಾತಿಯಲ್ಲಿ ಅವರನ್ನು 'ಮೀಠಾ ಕಾಮದಾರ್' ಎನ್ನುತ್ತಾರೆ. ಉಪ್ಪು ಮಾಡುವ ಪ್ರಕ್ರಿಯೆ ನೋಡಲಿಕ್ಕೇನೋ ಸುಲಭ ಎನ್ನಿಸಬಹುದು. ಆದರೆ ಹಗಲು ನೆತ್ತಿ ಸುಡುವ ಬಿಸಿಲು, ಫೆಬ್ರುವರಿಯವರೆಗೆ ರಾತ್ರಿ ಕೊರೆಯುವ ಚಳಿ. ಮಾರ್ಚ್ ನಂತರ ಬಿರುಬಿಸಿಲು, ಬಿಸಿಗಾಳಿ ಬೀಸುವ ರಣಭೂಮಿಯಲ್ಲಿ ಇದ್ದುಕೊಂಡು ಉಪ್ಪು ಮಾಡುವುದು ಅಪಾರ ದೈಹಿಕ ಶ್ರಮದ, ಕಠಿಣ ಕಾಯಕ. ಅಕ್ಟೋಬರ್ ತಿಂಗಳಿನಿಂದ ಮೇ ಕೊನೆಯವರೆಗೆ ರಣ್ ಪ್ರದೇಶದಲ್ಲಿಯೇ ವಾಸಿಸುವ ಅಗರಿಯಾಗಳು ಉಪ್ಪು ಮಾಡುವ ಪ್ರಕ್ರಿಯೆ ಕುತೂಹಲಕಾರಿ.

## ರಣಭೂಮಿಯಲ್ಲಿ ಉಪ್ಪಿನ ಗದ್ದೆಗಳು

ಅಕ್ಟೋಬರ್ ತಿಂಗಳು ಆರಂಭವಾಗುತ್ತಿದ್ದಂತೆ ಛೋಟಾ ರಣ್‌ಗೆ ಧ್ರಾಂಗದ್ರಾ, ಪಾಟಡಿ, ಹಲವಡ್ ಸುತ್ತಲಿರುವ ಹತ್ತಿರದ ಹಳ್ಳಿಗಳಿಂದ ಉಪ್ಪು ಮಾಡುವ ಅಗರಿಯಾ ಸಮುದಾಯದವರು ಬರತೊಡಗುತ್ತಾರೆ. ಆ ವೇಳೆಗೆ ಮಳೆನೀರು ನಿಂತು ಜೌಗುಭೂಮಿಯಾಗಿರುವ ರಣ್ ಒಣಗಲು ಶುರುವಾಗಿರುತ್ತದೆ.

ಮೊದಲೆಲ್ಲ ಸೈಕಲ್ಲಿನಲ್ಲಿಯೇ ಸಾಮಾನುಗಳನ್ನು ಸಾಗಿಸುತ್ತಿದ್ದರಂತೆ. ಈಗ ಟ್ರ್ಯಾಕ್ಟರುಗಳಲ್ಲಿ ಸಾಮಾನುಗಳನ್ನು ಹೇರಿಕೊಂಡು ಬರುತ್ತಾರೆ. ಆರಂಭದ ನಾಲ್ಕೈದು ದಿನಗಳು ಜೋಪಡಿ ಸಿದ್ಧಮಾಡಿಕೊಳ್ಳುವುದಕ್ಕೆ ಬೇಕಾಗುತ್ತದೆ. ಆಗ ಹೊರಗೆ ಬಯಲಿನಲ್ಲಿಯೇ ಮಲಗಿ, ಅಲ್ಲಿಯೇ ಅಡುಗೆ ಮಾಡಿಕೊಳ್ಳುತ್ತಾರೆ. ಜೋಪಡಿಯ ಒಳಗೆ ಸಾಮಾನ್ಯವಾಗಿ ಎರಡು ಅಥವಾ ಮೂರು ಭಾಗಗಳಿರುತ್ತವೆ – ಹೊರಕೋಣೆ, ಅಡುಗೆಕೋಣೆ ಮತ್ತು ಇನ್ನೊಂದು ಉಳಿದ ಸಾಮಾನುಗಳನ್ನಿಟ್ಟುಕೊಳ್ಳಲು ಕೋಣೆ.

### ಕಾಗದದ ಮೇಲೆ ಕಲ್ಯಾಣ ಕಾರ್ಯಕ್ರಮ

ಕೆಲವು ರಾಜ್ಯ ಸರ್ಕಾರಗಳು ಉಪ್ಪಿನ ರೈತರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿವೆ. ರಾಜಸ್ಥಾನ ಸರ್ಕಾರವು ನೋಂದಣಿ ಹಾಗೂ ಗುರುತಿನ ಪತ್ರ ಪಡೆಯಲು ಅಗತ್ಯ ಹಣಕಾಸಿನ ನೆರವು, ವಿಮಾ ಯೋಜನೆಗಳ ಜೊತೆಗೆ ಕೆಲಸಗಾರರಿಗೆ ಗಮ್ ಬೂಟುಗಳು, ನಾಗಲ್‌ಗಳು, ಸೈಕಲ್‌ಗಳನ್ನು ನೀಡುತ್ತಿದೆ. ಗುಜರಾತ್ ಸರ್ಕಾರವು ಉಪ್ಪು ತಯಾರಿಕಾ ಸ್ಥಳಗಳಿಗೆ ತಲುಪಲು ರಸ್ತೆಗಳು, ಉಪ್ಪಿನ ರಫ್ತಿಗೆ ಜೆಟ್ಟಿ, ತಯಾರಿಕಾ ಸ್ಥಳಗಳಲ್ಲಿ ವಿಶ್ರಾಂತಿ ಶೆಡ್‌ಗಳು, ರಕ್ಷಣಾ ಕಿಟ್‌ಗಳು, ಮೊಬೈಲ್ ಮೆಡಿಕಲ್ ವ್ಯಾನ್‌ಗಳು, ಮೊಬೈಲ್ ರೇಶನ್ ವ್ಯಾನ್; ಪೈಪ್‌ಲೈನ್ ಹಾಗೂ ಟ್ಯಾಂಕರ್ ಮೂಲಕ ಕುಡಿಯುವ ನೀರು, ಶಿಕ್ಷಣ ಸೌಲಭ್ಯಗಳು, ಶಾಲೆಗಳಿಗೆ ಕಂಪ್ಯೂಟರ್‌ಗಳು, ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ, ಇತ್ಯಾದಿ ಒದಗಿಸುತ್ತದೆ. ಇದು ಉಪ್ಪಿನ ಕೆಲಸಗಾರರಿಗೆ ಏನು ಕಲ್ಯಾಣ ಕಾರ್ಯಕ್ರಮಗಳಿವೆ ಎಂದು ಸಂಸತ್ತಿನಲ್ಲಿ ಸಂಸದರೊಬ್ಬರು ಕೇಳಿದ್ದಕ್ಕೆ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದವರು ನೀಡಿದ ಉತ್ತರ. ಆದರೆ ವಾಸ್ತವದಲ್ಲಿ ಹೆಚ್ಚಿನ ಯೋಜನೆಗಳು ಕಾಗದದ ಮೇಲೆಯೇ ಉಳಿದಿವೆ.

